# ಕಾಮಿಡಿ ಹುಡುಗಿಯ ಸೀರಿಯಸ್ ಪಾತ್ರ

■ ಪದ್ಮನಾಭ ಭಟ್



'ಡಿಯರ್ ಸತ್ಯ' ಸಿನಿಮಾ ಮೂಲಕ ಚಿತ್ರರಂಗಕ್ಕೆ ಅಡಿಯಿಡುತ್ತಿರುವ ಹುಡುಗಿ ಅರ್ಚನಾ ಕೊಟ್ಟಿಗೆ. ಹಾಸ್ಯಪಾತ್ರಗಳಲ್ಲಿ ಮಿಂಚಬೇಕು ಎನ್ನುವ ತುಸು ಭಿನ್ನ ಕನಸಿನೊಟ್ಟಿಗೆ ಚಂದನವನದ ಪಡಸಾಲೆಗೆ ಬಂದಿರುವ ಅವರು, ಏನಾದರೂ ಮಾಡುವುದಾದರೆ ಇಲ್ಲಿಯೇ ಎಂದು ದೃಢನಿಶ್ಚಯ ಮಾಡಿದ್ದಾರೆ.

ಸಾಮಾನ್ಯವಾಗಿ ಚಿತ್ರರಂಗಕ್ಕೆ ಹೊಸತಾಗಿ ಪರಿಚಿತಗೊಂಡ ನಟಿಯರನ್ನು, 'ನಿಮ್ಮ ಕನಸಿನ ಪಾತ್ರ ಯಾವುದು?' ಎಂದು ಕೇಳಿದರೆ ಅನುಷ್ಕಾ ಶೆಟ್ಟಿ ನಟಿಸಿದ 'ಅರುಂಧತಿ' ಪಾತ್ರವನ್ನೋ, 'ಬಾಹುಬಲಿ' ಸಿನಿಮಾದ ರಮ್ಯಕೃಷ್ಣ ನಟನೆಯ ಶಿವಗಾಮಿ ಪಾತ್ರವನ್ನೋ ಹೆಸರಿಸುತ್ತಾರೆ. ಇಲ್ಲವೇ ಮಹಿಳಾಪ್ರಧಾನ ಸಿನಿಮಾದದಲ್ಲಿ ನಟಿಸುವ ಆಸೆ ಇದೆ ಎಂದು ಕಲ್ಪನಾ, ಆರತಿ, ಮಂಜುಳಾ ಅವರನ್ನು ನೆನಪಿಸಿಕೊಳ್ಳುತ್ತಾರೆ. ಆದರೆ 'ಡಿಯರ್ ಸತ್ಯ' ಸಿನಿಮಾ ಮೂಲಕ ಬಣ್ಣದ ಲೋಕಕ್ಕೆ ಎಂಟ್ರಿ ಆಗಿರುವ ಅರ್ಚನಾ ಕೊಟ್ಟಿಗೆ ಅವರದ್ದು ಕೊಂಚ ಭಿನ್ನ ಉತ್ತರ.

'ನನಗೆ ಹಾಸ್ಯಪ್ರಧಾನ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು ಎಂಬ ಆಸೆ ಇದೆ' ಎನ್ನುವುದು ಅವರ ಉತ್ತರ. ಇದಕ್ಕೆ ಕಾರಣವೂ ಇದೆ. ಮೊದಲಿನಿಂದಲೂ ಅರ್ಚನಾ ಅವರಿಗೆ ಹಾಸ್ಯಪ್ರಜ್ಞೆ ಜಾಸ್ತಿ. ಕಾಲೇಜು ದಿನಗಳಲ್ಲಿ ಸ್ಟ್ಯಾಂಡ್ ಅಫ್ ಕಾಮಿಡಿಯನ್ ಆಗಿಯೂ ಮಿಂಚಿದ್ದ ಅವರು, ಕನ್ನಡದ 'ಲೋಲ್‌ಬಾಗ್' ಸ್ಟ್ಯಾಂಡ್ ಆಫ್ ಕಾಮಿಡಿ ತಂಡದಲ್ಲಿಯೂ ಪ್ರದರ್ಶನ ನೀಡಿದ್ದರು. ಹೀಗಾಗಿಯೇ, 'ಯಾವುದೇ ರೀತಿಯ ಪಾತ್ರ ಸಿಕ್ಕರೂ ನಟಿಸುತ್ತೇನೆ. ನಾಯಕಿಯೇ ಆಗಬೇಕು ಎಂದೂ ಇಲ್ಲ. ಒಳ್ಳೆಯ ಪಾತ್ರ ಆದರೆ ಆಯಿತು. ಆದರೆ ನನಗೆ ಹಾಸ್ಯ ಇಷ್ಟ. ಹಾಸ್ಯಪ್ರಧಾನ ಮಾತ್ರದಲ್ಲಿ ಹೆಚ್ಚು ಶಕ್ತವಾಗಿ ನಟಿಸಬಲ್ಲೆ ಎಂಬ ವಿಶ್ವಾಸವಿದೆ. ಹಾಗಾಗಿ ಆ ರೀತಿಯ ಪಾತ್ರಗಳನ್ನು ಹೆಚ್ಚು ಆಸ್ಥೆಯಿಂದ ಎದುರುನೋಡುತ್ತೇನೆ' ಎನ್ನುತ್ತಾರೆ ಅವರು.

ಆದರೆ ಚಂದನವನದಲ್ಲಿ ಅವರು ಇಡುತ್ತಿರುವ ಮೊದಲ ಹೆಜ್ಜೆಯಲ್ಲೇನೂ ಅವರ ಈ ಕಾಮಿಡಿ ಹಂಬಲ ಈಡೇರಿಲ್ಲ. ಶಿವಗಣೇಶನ್ ನಿರ್ದೇಶನದ 'ಡಿಯರ್ ಸತ್ಯ' ಪಕ್ಕಾ ಮಾಸ್ ಎಂಟರ್‌ಟೈನ್ ಸಿನಿಮಾ. ಅದರಲ್ಲಿ ನಾಯಕಿಯಾಗಿ ಅರ್ಚನಾ ನಟಿಸುತ್ತಿದ್ದಾರೆ.

ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದಿರುವ ಇವರು, ಕ್ರೈಸ್ಟ್ ಕಾಲೇಜಿನಲ್ಲಿ ಬಿ.ಕಾಂ. ಓದಿದ್ದಾರೆ. ಮಗಳು ಸಿ.ಎ. ಮಾಡಲಿ ಎಂಬುದು ಪಾಲಕರ ಆಸೆಯಾಗಿತ್ತು. ಆದರೆ ಕಾಲೇಜು ದಿನಗಳಲ್ಲಿ ಅಚಾನಕ್ಕಾಗಿ ಬಂದ ಒಂದು ಅವಕಾಶ ಅರ್ಚನಾ ಅವರ ಬದುಕಿನ ಚಲನೆಯ ದಿಕ್ಕನೇ ಬದಲಿಸಿತು.

ಜಾಹೀರಾತೊಂದರಲ್ಲಿ ನಟಿಸಿದ ನಂತರ ಅವರಿಗೆ ಕ್ಯಾಮೆರಾ ಕಡೆಗೆ ಕುತೂಹಲ ಹುಟ್ಟಿಕೊಂಡಿತು. ಅದಕ್ಕೆ ಪೂರಕವಾಗಿ ಆಗೀಗ ಒಂದೊಂದು ಕಿರುಚಿತ್ರ, ಜಾಹೀರಾತುಗಳಲ್ಲಿ ನಟಿಸುವ ಅವಕಾಶ ಬರುತ್ತಲೇ ಹೋಯಿತು. ಲೆಕ್ಕಗಳ ಗೋಜಲಿಗೆ ಬೆನ್ನು ಮಾಡಿದ ಅವರು ಬಣ್ಣಗಳ ಮೋಹಕಲೋಕಕ್ಕೆ ಅಭಿಮುಖರಾದರು. ನಟನೆಯ ಆಸಕ್ತಿಯನ್ನು ಬೆಳೆಸಿಕೊಂಡು ಒಂದು ನಾಟಕದಲ್ಲಿಯೂ ನಟಿಸಿದರು.

ಬಿ.ಕಾಂ. ಮುಗಿಸಿದ ಅರ್ಚನಾ ಆರ್‌ಜೆ ಪ್ರದೀಪ್ ಅವರ ಸಖತ್ ಸ್ಟುಡಿಯೊದಲ್ಲಿ ಇಂಟರ್ನ್‌ಷಿಪ್‌ಗೆ ಸೇರಿಕೊಂಡರು. ಅಲ್ಲಿ ಅವರಿಗೆ ಸ್ವಂತ ಕಥೆಯನ್ನು ಬರೆದು ಕಿರುವಿಡಿಯೊ ಮಾಡುವ